ತಯಾರಾಗುವ ಇದೇ ಹೆಸರಿನ ಸೀರೆ ಅತ್ಯಂತ ಕಲಾತ್ಮಕ ಹಾಗೂ ವೈಭವೋಪೇತ. ಬೆಳ್ಳಿ ಅಥವಾ ಚಿನ್ನದ ಅಂಶವನ್ನು ಇದರ ಜರಿಯಲ್ಲಿ ಸೇರಿಸುವುದು ವಿಶೇಷ. ಇದು ಕೂಡಾ ಒಡಲು, ಅಂಚಿನ ಜರಿಯಿಂದಾಗಿ ಅತ್ಯಂತ ಭಾರ.

ಮಧ್ಯಪ್ರದೇಶದಲ್ಲಿ ಚಂದೇರಿ ರೇಷ್ಮೆ ಪ್ರಸಿದ್ಧವಾಗಿದ್ದು, ಇದು ಕರ್ನಾಟಕದಲ್ಲೂ ಜನಪ್ರಿಯವಾಗಿದೆ. ರೇಷ್ಮೆ ಮತ್ತು ಹತ್ತಿ ಎಳೆಗಳಿಂದ ಕೈಮಗ್ಗದ ಮೂಲಕ ನೇಯುವ ಇದರ ಒಡಲು ಅತ್ಯಂತ ನಯವಾಗಿದ್ದು ಬುಟ್ಟಾ ಆಕರ್ಷಕವಾಗಿರುತ್ತದೆ.

ತೆಲಂಗಾಣದ ಭೂದಾನ ಪೋಚಂಪಲ್ಲಿ ಇಕಟ್ ಸೀರೆಗಳನ್ನು ಅವುಗಳ ಒಡಲಿನ ದೊಡ್ಡದಾಗಿ ಎದ್ದು ಕಾಣುವಂತಹ ವಿನ್ಯಾಸದಿಂದಲೇ ಗುರುತಿಸಬಹುದು. ಜಾಮೆಟ್ರಿಕ್ ವಿನ್ಯಾಸಗಳು ಅತ್ಯಂತ ಗಾಢ ವರ್ಣದಲ್ಲಿರುತ್ತವೆ.

ಗುಜರಾತ್‌ನ ಪಾಠಣ್‌ನ ಪಟೋಲ ಇಕಟ್ ಸೀರೆಗಳೂ ಕೂಡಾ ಗಾಢ ವರ್ಣದವು. ಇವು ಕೈಮಗ್ಗ ಸೀರೆಗಳಾಗಿದ್ದು, ಎಳೆಗಳಿಂದಲೇ ಒಡಲಿನ ಮೇಲೆ ವಿನ್ಯಾಸ ರೂಪಿಸುವುದರಿಂದ ಒಂದು ಸೀರೆ ತಯಾರಿಸಲು ತಿಂಗಳುಗಟ್ಟಲೆ ಬೇಕಾಗುತ್ತದೆ.

ಆಸ್ಸಾಮಿನ ಮುಗಾ ರೇಷ್ಮೆ ಸೀರೆಯನ್ನು ವಿಶೇಷವಾದ ರೇಷ್ಮೆ ಎಳೆಗಳಿಂದ ನೇಯಲಾಗುವುದು. ಇದು ಮೂಲತಃ ಚಿನ್ನದ ಬಣ್ಣ ಹೊಂದಿರುತ್ತದೆ.

ಪ.ಬಂಗಾಳದ ಬಾಲುಶಾರಿ, ತಾಂಚೊಯ್, ಬಿಹಾರದ ಬಾಗಲ್ಪುರಿ, ಶಂಬಲ್ಪುರಿ, ಮಹಾರಾಷ್ಟ್ರದ ಪೈಥಾನಿ, ರಾಜಸ್ತಾನದ ಕೋಟಾ ಸೀರೆ, ಆಂಧ್ರದ ಧರ್ಮಾವರಂ, ಒಡಿಶಾದ ಬೊಮ್‌ಕಾಯ್, ಕೇರಳದ ಪಟ್ಟು, ಟಸ್ಸಾರ್, ಜಾಮ್ದಾನಿ, ಗದ್ವಾಲ್, ಉಪ್ಪಡ ರೇಷ್ಮೆ ಸೀರೆಗಳು ಮಹಿಳೆಯರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.

ಧರಿಸುವ ಆಭರಣಗಳು ಕನಿಷ್ಠವಾಗಿದ್ದರೂ ವಿವಾಹದ ಸಂಪ್ರದಾಯಗಳಿಗೆ ಒಡ್ಡಿಕೊಳ್ಳುವ ಯುವತಿ ಸಾಲಂಕೃತಳಾಗುವ ರೂಢಿಯಿದೆ. ಸರಳವಾದ ರೂಪವಿದ್ದರೂ ಕಣ್ಣುಕುಕ್ಕುವ ಸೌಂದರ್ಯ ಉಕ್ಕುವಂತೆ ಮಾಡುವ ಶಕ್ತಿ ಈ ಒಡವೆಗಳಿಗಿದೆ. ಮಂಗಲಸೂತ್ರ, ನೆಕ್ಲೇಸ್, ಬಳೆಗಳು, ಕಿವಿಯೋಲೆ, ಉಂಗುರ ಇವಿಷ್ಟೇ ಒಡವೆಗಳಲ್ಲಿ ಮುಗಿಸುವವರೂ ಇದ್ದಾರೆ. ಮುಡಿಯಿಂದ ಅಡಿಯತನಕ ಆಭರಣ ಹಾಕಿ ಮಗಳ ಉಡಿಯಕ್ಕಿ ತುಂಬಿ ಕಳಿಸುವವ ಉಳ್ಳವರಿಗೂ ಕೊರತೆಯಿಲ್ಲ. ಈ ಒಡವೆಗಳೂ ಅಷ್ಟೆ, ಸಂಪ್ರದಾಯ, ಸಂಸ್ಕೃತಿಗಳ ಪ್ರತೀಕ.

ಇತ್ತೀಚೆಗೆ ಕೆಲವು ಕಾಲ ಕಡಿಮೆ ತೂಕದ ಸರಳ ಆಭರಣಗಳ ಟ್ರೆಂಡ್ ಇತ್ತು. ಭಾರವಾದ ಒಡವೆಗಳಾದರೆ ಮದುವೆ ಸಂದರ್ಭದಲ್ಲಿ ಮಾತ್ರ ಧರಿಸಿ ಲಾಕರ್‌ನಲ್ಲಿ ಇಡುವುದಕ್ಕೆ ಲಾಯಕ್ಕು ಎಂಬ ಅಭಿಪ್ರಾಯವೂ ಇದಕ್ಕೆ ಕಾರಣ ಎನ್ನಬಹುದು. ಆದರೆ ಕುಟುಂಬದಲ್ಲೋ, ಸಂಬಂಧಿಕರಲ್ಲೋ ಅಥವಾ ಸ್ನೇಹಿತರ ವಲಯದಲ್ಲೋ ಮದುವೆಯಾದರೆ ಅಂತಹ ಸಮಾರಂಭದಲ್ಲಿ ಒಂದೋ ಎರಡೋ ಆಭರಣ ಧರಿಸಲು ಇಂತಹ ಭರ್ಜರಿ ಒಡವೆಗಳೇ ಸರಿ ಎಂಬುದು ಹಲವರ ಅಭಿಪ್ರಾಯ. ಹೀಗಾಗಿ ಮದುವೆಗೆಂದು ಖರೀದಿಸುವಾಗ ಹೆಚ್ಚು ತೂಕದ, ಸಾಂಪ್ರದಾಯಕ ನೋಟವಿರುವ ಆಭರಣಗಳತ್ತ ವಾಲುವವರೇ ಹೆಚ್ಚು.

‘ಮದುವೆಗೆ ಈಗಲೂ ಸಾಂಪ್ರದಾಯಕ ಆಭರಣಗಳಾದ ಕಾಸಿನ ಸರ, ಮಾವಿನಕಾಯಿ ನೆಕ್ಲೇಸ್ ಖರೀದಿಸುವುದು ಜಾಸ್ತಿ. ಆದರೆ ಆರತಕ್ಷತೆಗೆ ಮಾತ್ರ ಧರಿಸುವ ಉಡುಪಿಗೆ ತಕ್ಕಂತೆ ಆಧುನಿಕ ಒಡವೆಗಳತ್ತ ಮುಖ ಮಾಡುತ್ತಾರೆ. ಹಳೆಯ ಹಾಗೂ ಹೊಸ ಒಡವೆಗಳ ಫ್ಯೂಷನ್ ಒಡವೆಗಳತ್ತಲೂ ಆಕರ್ಷಣೆ ಹೆಚ್ಚಿದೆ’ ಎನ್ನುತ್ತಾರೆ ಬೆಂಗಳೂರಿನ ‘ಪ್ರತಿಭಾ ಜ್ಯುಯೆಲರಿ ಹೌಸ್’ನ ಪಾಲುದಾರ ಎಸ್.ಎನ್.ಶರತ್‌ಕುಮಾರ್.

